P.W.:1

ಈ ದಿನ ದಿ:20.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು:- ಎದುರುದಾರರ ಪರ ಕೆಎಂಆರ್ ವಕೀಲರಿಂದ:-

ನನಗೆ ಕೆಂಪಮ್ಮ ಎಂದು ಹೆಸರಿಟ್ಟಿದ್ದು, ನನ್ನನ್ನು ಸುಧಾ ಎಂದು ಕರೆಯುತ್ತಾರೆ ಎಂದರೆ ಸರಿ. ನಾನು ಚನ್ನರೂಢ ಗ್ರಾಮ, ಜವಲಗೆರೆ ಅಂಚೆ, ಡೆಂಕಣಿಕೋಟೆ ತಾಲ್ಲೂಕು, ಧರ್ಮಪುರಿ ಜಿಲೆ, ತಮಿಳುನಾಡು ರಾಜ್ಯದ ವಾಸಿ ಎಂದರೆ ಸರಿ. ನನ್ನ ಮತ್ತು ಎದುರುದಾರನ ವಿವಾಹವು ಕೊದಂಡಸ್ವಾಮಿ ದೇವಸ್ಥಾನದಲ್ಲಿ ನಡೆದಿರುತ್ತದೆ ಎಂದರೆ ಸರಿಯಲ್ಲ.

ನನ್ನ ಮತ್ತು ಎದುರುದಾರನ ಮದುವೆಯಾದ ನಂತರ 9 ತಿಂಗಳಲ್ಲಿ ಮಗು ಜನಿಸಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಒಂದುವರೆ ವರ್ಷದ ನಂತರ ಜನಿಸಿರುತ್ತದೆ ಎಂದು ನುಡಿಯುತ್ತಾರೆ. ಎದುರುದಾರರಿನಿಗೆ 75 ವರ್ಷ ವಯಸ್ಸಾಗಿರುವ ಕಾರಣ ಅವರಿಗೆ ಜೀವನಾಂಶ ಕೊಡುವ ಶಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ವಯಸ್ಸಾಗಿರುವ ಕಾರಣ ಅವರನ್ನು ಸಾಕುವ ಜವಾಬ್ದಾರಿ ನನ್ನ ಮೇಲಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಕನಕಪುರ.